# Second Semester 3 Yr. LL.B. Examination, March/April 2021
# FAMILY LAW – II : Mohammedan Law and Indian Succession Act

Duration : 3 Hours Max. Marks : 80

**Instructions : 1. Answer all five Units.**
**2. One essay type question and short note/problems is compulsory from each Unit.**
**3. Figures to the right indicate marks.**
**4. Answer should be written either in English or in Kannada completely.**

ಸೂಚನೆಗಳು : 1. ಎಲ್ಲಾ ಐದು ಘಟಕಗಳಿಗೂ ಉತ್ತರಿಸಿ.
2. ಪ್ರತೀ ಘಟಕದಿಂದ ಒಂದು ಪ್ರಬಂಧಾತ್ಮಕ ಪ್ರಶ್ನೆ ಹಾಗೂ ಒಂದು ಲಘು ಟಿಪ್ಪಣಿ/ ಸಮಸ್ಯೆಗೆ ಉತ್ತರಿಸುವುದು ಕಡ್ಡಾಯ.
3. ಪ್ರಶ್ನೆಪತ್ರಿಕೆಯ ಬಲಬದಿಯಲ್ಲಿ ಅಂಕಗಳು ಸೂಚಿತವಾಗಿವೆ.
4. ಉತ್ತರಗಳನ್ನು ಪೂರ್ಣವಾಗಿ ಆಂಗ್ಲಭಾಷೆಯಲ್ಲಿ ಅಥವಾ ಕನ್ನಡ ಭಾಷೆಯಲ್ಲಿ ಬರೆಯಬೇಕು.

## UNIT – I

Q. No. 1. a) Explain various schools and sub-schools of Muslim law. Marks : 10
ಮುಸ್ಲಿಂ ಕಾನೂನಿನ ವಿವಿಧ ಪಂಥ (ಶಾಲೆ) ಹಾಗೂ ಉಪ ಪಂಥಗಳನ್ನು (ಉಪಶಾಲೆ) ವಿವರಿಸಿ.

OR/ ಅಥವಾ

Q. No. 1. a) "Muslim marriage is essentially a contract". Elucidate. Marks : 10
''ಮುಸ್ಲಿಂ ವಿವಾಹವು ಅಗತ್ಯವಾಗಿ ಒಂದು ಕರಾರು''. ವಿಶದೀಕರಿಸಿ.

Q. No. 1. b) A Muslim widow is in possession of her husband's land in lieu of dower money. She is not ready to give possession of the house to other heirs of her husband until her dower amount is paid. Is her decision justifiable ? Marks : 6
ಒಬ್ಬ ಮುಸ್ಲಿಂ ವಿಧವೆಯು ತನಗೆ ತನ್ನ ಪತಿಯಿಂದ ಬಾಕಿ ಇರುವ ಕನ್ಯಾಶುಲ್ಕದ ಹಣಕ್ಕಾಗಿ ಆತನ ಭೂಮಿಯ ಸ್ವಾಧೀನವನ್ನು ಹೊಂದಿದ್ದು, ತನ್ನ ಕನ್ಯಾಶುಲ್ಕದ ಹಣ ಸಂದಾಯವಾಗುವ ತನಕ ಗಂಡನ ವಾರಸುದಾರರಿಗೆ ಆ ಭೂಮಿಯ ಕಬ್ಜೆಯನ್ನು ಕೊಡಲು ಸಿದ್ಧವಿಲ್ಲ. ಆಕೆಯ ನಿರ್ಧಾರವು ಸಮರ್ಥನೀಯವೇ ?

OR/ ಅಥವಾ

Q. No. 1. b) Pushpa, a hindu woman, embraces islam and marries Rizwan, a muslim. Later she re-embraces hinduism and marries Rajesh, a hindu , without divorcing Rizwan. Rizwan wants to prosecute Pushpa for bigamy. Advice him. Marks : 6

ಪುಷ್ಪ ಎಂಬ ಹಿಂದೂ ಮಹಿಳೆಯು ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿ ರಿಜ್ವಾನ್ ಎಂಬ ಮುಸ್ಲಿಮನನ್ನು ವಿವಾಹವಾಗುತ್ತಾಳೆ. ನಂತರ ಆಕೆಯು ಪುನ: ಹಿಂದೂ ಧರ್ಮಕ್ಕೆ ಮತಾಂತರಗೊಂಡು, ರಿಜ್ವಾನನಿಗೆ ವಿಚ್ಛೇದನವನ್ನು ನೀಡದೇ, ರಾಜೇಶ್ ಎಂಬ ಹಿಂದೂವನ್ನು ವಿವಾಹವಾಗುತ್ತಾಳೆ. ಈಗ ರಿಜ್ವಾನನು ಪುಷ್ಪಳ ಮೇಲೆ ದ್ವಿಪತಿತ್ವದ ಕಾರಣದ ಮೇಲೆ ಪ್ರಕರಣ ದಾಖಲು ಮಾಡಲು ಇಚ್ಛಿಸಿದ್ದಾನೆ. ಅವನಿಗೆ ಸಲಹೆ ನೀಡಿ.

UNIT – II

Q. No. 2. a) What is acknowledgement of paternity ? Explain the conditions of valid acknowledgement. Marks : 10

ಪಿತೃತ್ವದ ಅಧಿಸ್ವೀಕೃತಿ ಎಂದರೇನು ? ವಿಧ್ಯುಕ್ತವಾದ ಅಧಿಸ್ವೀಕೃತಿಯ ನಿಬಂಧನೆಗಳನ್ನು ವಿವರಿಸಿ.

OR/ **ಅಥವಾ**

Q. No. 2. a) Discuss the right of a muslim woman to claim maintenance. Marks : 10

ಮುಸ್ಲಿಂ ಮಹಿಳೆಯ ಜೀವನಾಂಶವನ್ನು ಕೇಳುವ ಹಕ್ಕನ್ನು ಚರ್ಚಿಸಿರಿ.

Q. No. 2. b) Write a short note on Khula. Marks : 6

ಖುಲಾದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ **ಅಥವಾ**

Q. No. 2. b) Write a short note on de facto guardian. Marks : 6

ವಾಸ್ತವಿಕ ಸಂರಕ್ಷಕನ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

UNIT – III

Q. No. 3. a) Discuss the testamentary powers of a muslim and the limits on such powers. Marks : 10

ಮುಸ್ಲಿಂ ವ್ಯಕ್ತಿಯ ಮರಣಶಾಸನ ಅಧಿಕಾರವನ್ನು ಹಾಗೂ ಆ ಅಧಿಕಾರಕ್ಕೆ ಇರುವ ಮಿತಿಗಳನ್ನು ಚರ್ಚಿಸಿರಿ.

OR/ **ಅಥವಾ**

Q. No. 3. a) Define "Wakf". Explain the essentials of a valid Wakf. Marks : 10

''ವಕ್ಫ್'' ನ್ನು ಪರಿಭಾಷಿಸಿ. ಒಂದು ವಿಧ್ಯುಕ್ತ ವಕ್ಫ್‌ನ ಅಗತ್ಯಾಂಶಗಳನ್ನು ವಿವರಿಸಿ.

Q. No. 3. b) Write a short note on loss of right of pre-emption. Marks : 6

ಪೂರ್ವಕ್ರಯಾಧಿಕಾರವನ್ನು ಕಳೆದುಕೊಳ್ಳುವುದು.

OR/ ಅಥವಾ

Q. No. 3. b) Write a note on revocation of gift. Marks : 6

ದಾನದ ರದ್ದತಿಯ ಬಗ್ಗೆ ಟಿಪ್ಪಣಿ ಬರೆಯಿರಿ.

UNIT – IV

Q. No. 4. a) What is "domicile" ? Explain the important provisions of Indian Succession Act relating to domicile. Marks : 10

ಅಧಿವಾಸ ಎಂದರೇನು ? ಅಧಿವಾಸದ ಬಗ್ಗೆ ಭಾರತೀಯ ಉತ್ತರಾಧಿಕಾರ ಅಧಿನಿಯಮದಲ್ಲಿ ಪ್ರಣೀತವಾಗಿರುವ ಮುಖ್ಯ ಉಪಬಂಧಗಳನ್ನು ವಿವರಿಸಿ.

OR/ ಅಥವಾ

Q. No. 4. a) Who are the sharers under Sunni law ? Explain the doctrine of Aul and Rudd. Marks : 10

ಸುನ್ನಿ ಕಾನೂನಿನಲ್ಲಿ ಪಾಲುದಾರರು ಎಂದರೆ ಯಾರು ? ಔಲ್ ಮತ್ತು ರದ್ ಸಿದ್ಧಾಂತವನ್ನು ವಿವರಿಸಿ.

Q. No. 4. b) Advi, a Parsi dies leaving behind him his wife, father, mother and two sisters. Distribute his property. Marks : 6

ಅದ್ವಿ ಎಂಬ ಪಾರ್ಸಿಯು ತನ್ನ ಹೆಂಡತಿ, ತಂದೆ, ತಾಯಿ ಹಾಗೂ ಇಬ್ಬರು ಸೋದರಿಯರನ್ನು ಬಿಟ್ಟು ಅಗಲಿದ್ದಾನೆ. ಆತನ ಆಸ್ತಿಯನ್ನು ಹಂಚಿರಿ.

OR/ ಅಥವಾ

Q. No. 4. b) 'X' an executor appointed by 'Y', paid the legacies created by 'Y' in his will first. After that the assets of 'Y' were found insufficient to pay the debts incurred by 'Y'. Advise aggrieved creditors. Marks : 6

'ವೈ' ಎಂಬಾತನಿಂದ ನೇಮಕಗೊಂಡ 'ಎಕ್ಸ್' ಎಂಬ ಕಾರ್ಯನಿರ್ವಾಹಕನು 'ವೈ' ರಚಿಸಿದ ಮರಣಶಾಸನ ದಾನಗಳನ್ನು ಪಾವತಿಮಾಡಿದನು. ತದ ನಂತರ ಉಳಿದ 'ವೈ' ಯ ಆಸ್ತಿಯಿಂದ 'ವೈ'ಯು ಮಾಡಿದ ಸಾಲದಮರುಪಾವತಿಯನ್ನು ಮಾಡಲು ಸಾಕಾಗಲಿಲ್ಲ. ನೊಂದ ಸಾಲಿಗರಿಗೆ ಸಲಹೆ ನೀಡಿ.

## UNIT – V

Q. No. 5. a) Define privileged will. Explain the rules relating to the execution and revocation of a privileged will. Marks : 10

''ವಿಶೇಷ ಅಧಿಕಾರ ಇರುವ ಮರಣಶಾಸನ'' ಎಂಬ ಪದವನ್ನು ಪರಿಭಾಷಿಸಿರಿ. ವಿಶೇಷ ಅಧಿಕಾರವಿರುವ ಮರಣಶಾಸನವನ್ನು ಮಾಡುವಾಗ ಹಾಗೂ ಹಿಂತೆಗೆದುಕೊಳ್ಳುವಾಗ ಅನುಸರಿಸುವ ನಿಯಮಗಳನ್ನು ವಿವರಿಸಿ.

OR/ ಅಥವಾ

Q. No. 5. a) Explain the provisions of the Indian Succession Act, 1925 regarding protection of property of deceased. Marks : 10

ಮೃತವ್ಯಕ್ತಿಯ ಆಸ್ತಿಯ ರಕ್ಷಣೆಗೆ ಸಂಬಂಧಿಸಿದಂತೆ ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 ರಲ್ಲಿ ಹೇಳಲಾದ ನಿಯಮಗಳನ್ನು ವಿವರಿಸಿ.

Q. No. 5. b) Write short note on jurisdiction of Family court. Marks : 6

ಕೌಟುಂಬಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ ಅಥವಾ

Q. No. 5. b) Raju bequeathes to his son Manu the gold chain presented to him by his uncle. Raju converts this chain into a bracelet. Manu claims this bracelet after the death of Raju. Is his claim valid ? Marks : 6

ರಾಜು ಎಂಬ ವ್ಯಕ್ತಿಯು ತನಗೆ ತನ್ನ ಮಾವನು ಉಡುಗೊರೆಯಾಗಿ ನೀಡಿದ ಚಿನ್ನದ ಸರವನ್ನು ತನ್ನ ಮಗ ಮನುವಿಗೆ ಮರಣಶಾಸನ ದಾನವಾಗಿ ನೀಡಲು ವ್ಯವಸ್ಥೆ ಮಾಡಿದ್ದಾನೆ . ಆದರೆ ರಾಜುವು ಆ ಸರವನ್ನು ಕೈ ಕಡಗವಾಗಿ ಮಾರ್ಪಡಿಸಿಕೊಂಡನು. ರಾಜುವಿನ ಮರಣಾನಂತರ ಮನುವು ಈ ಕೈ ಕಡಗಕ್ಕೆ ತನ್ನ ಹಕ್ಕುದಾರಿಕೆ ಮಂಡಿಸಿದ್ದಾನೆ. ಈ ಹಕ್ಕುದಾರಿಕೆ ವಿಧಿಬದ್ಧವೇ ?

---